KACB610011202023

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶಿಡ್ಲಘಟ್ಟ**

ದಿನಾಂಕ 2ನೇ ಜುಲೈ 2026

**<u>ಉಪಸ್ಥಿತರು</u>**

**ಶ್ರೀ.ಮಹಮ್ಮದ್ ರೋಷನ್ ಷಾ ಎಂ.ಎ.ಎಲ್.ಎಲ್.ಬಿ.,**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಶಿಡ್ಲಘಟ್ಟ

**<u>ದಂಡ ಪ್ರಕರಣ ಸಂಖ್ಯೆ 291/2023</u>**

**ಫಿರ್ಯಾದುದಾರರುಃ** ರಾಜ್ಯದ ಪರ ನಗರ ಪೊಲೀಸ್ ಠಾಣೆ, ಶಿಡ್ಲಘಟ್ಟ

**(ಪ್ರತಿನಿಧಿಸುವವರು ಮಾನ್ಯ ಸರ್ಕಾರಿ ಅಭಿಯೋಜಕರು)**

**ವಿರುದ್ದ**

**ಆರೋಪಿಗಳು** :

1. ರಾಕೇಶ್ ಬಿನ್ ಶ್ರೀಧರ್,
ವಯಸ್ಸು 25 ವರ್ಷ

2. ರುದ್ರೇಶ್ ಬಿನ್ ಲೇಟ್ ಬಸವರಾಜು
ವಯಸ್ಸು 25 ವರ್ಷ
ವಾಸಃ ವಾರ್ಡ್ ನಂ 22, ಕಾಮಟಿಗರ ಪೇಟೆ
ಶಿಡ್ಲಘಟ್ಟ ಟೌನ್
ಚಿಕ್ಕಬಳ್ಳಾಪುರ

3. ಗಜೇಂದ್ರ ಬಿನ್ ನಾರಾಯಣಪ್ಪ
ವಯಸ್ಸು 28 ವರ್ಷ
ವಾಸಃ ಅರಳಪೇಟೆ, ಶಿಡ್ಲಘಟ್ಟ ಟೌನ್
ಚಿಕ್ಕಬಳ್ಳಾಪುರ

**(ಪ್ರತಿನಿಧಿಸಿದವರುಃ ಶ್ರೀ ಆರ್ ಜಿ ವಕೀಲರು)**

**<u>ತೀರ್ಪು</u>**

ಶಿಡ್ಲಘಟ್ಟ ನಗರ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 323, 324, 504,

506 ಸಹವಾಚಕ ಕಲಂ 34 ರಡಿಯಲ್ಲಿ ಈ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯಂತೆ ಈ ಪ್ರಕರಣದ ಮುಖ್ಯ ಸಾರಾಂಶ ಈ ಕೆಳಕಂಡಂತೆ ಇದೆಃ-**

ದಿನಾಂಕ 13/11/2023 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಚಾಸಾ 1 ರವರು ಶಿಡ್ಲಘಟ್ಟ ನಗರ ಪೊಲೀಸ್ ಠಾಣಾ ಸರಹದ್ದಿನ ಕನಕನಗರದ ಅಂಜನಾದ್ರಿ ಬಾರ್ ಪಕ್ಕದಲ್ಲಿರುವ ಹೆಚ್ ಪಿ ಪೆಟ್ರೋಲ್ ಬಂಕ್ ನಲ್ಲಿ ಪೆಟ್ರೋಲ್ ಹಾಕಿಸಿಕೊಳ್ಳಲು ತನ್ನ ದ್ವಿಚಕ್ರ ವಾಹನದಲ್ಲಿ ಪೆಟ್ರೋಲ್ ಹಾಕಿಸಿಕೊಳ್ಳಲು ಹೋದಾಗ ಆರೋಪಿಗಳು ತಮ್ಮ ದ್ವಿಚಕ್ರ ವಾಹಗಳಲ್ಲಿಬಂದು ಮೊದಲು ನಮಗೆ ಪೆಟ್ರೋಲ್ ಹಾಕುವಂತೆ ಅಲ್ಲಿನ ಹುಡುಗರಿಗೆ ಹೇಳಿದಾಗ ಚಾಸಾ 1 ರವರು ಮೊದಲು ಬಂದಿದ್ದೇನೆ ನಾನು ಪೆಟ್ರೋಲ್ ಹಾಕಿಸಿಕೊಂಡ ಮೇಲೆ ನೀವು ಹಾಕಿಸಿಕೊಳ್ಳಿ ಎಂದು ಹೇಳಿದಾಗ ಆಗ 1ನೇ ಆರೋಪಿಯು ಚಾಸಾ 1 ರವರನ್ನು ಕುರಿತು ಈ ತುರ್ಕು ನನ್ನ ಮಕ್ಕಳದು ಜಾಸ್ತಿ ಆಗಿದೆ ಪೆಟ್ರೋಲ್ ಹಾಕಿಸಿಕೊಂಡ ನಂತರ ನೀನು ಹಾಕಿಸುಕೋ ಎಂದು ಕೆಟ್ಟ ಮಾತುಗಳಿಂದ ಬೈದಿದ್ದು ಚಾಸಾ 1 ರವರು ಯಾಕಣ್ಣ ಈ ರೀತಿ ಮಾತನಾಡುತ್ತಿದ್ದೀರಾ ಎಂದು ಕೇಳಿದಾಗ ಆರೋಪಿಗಳು ಚಾಸಾ 1 ರವರ ಮೇಲೆಜಗಳ ತೆಗೆದು ಕೈಗಳಿಂದ ಮೈಮೇಲೆ ಹೊಡೆದು ಆ ಪೈಕಿ 2ನೇ ಆರೋಪಿಯು ಮುಷ್ಟಿಯಿಂದ ಚಾಸಾ 1 ರವರ ತುಟಿಗಳಿಗೆ ಗುದ್ದಿದಾಗ ಬಾಯಿ ಮತ್ತು ಮೂಗಿನಿಂದ ರಕ್ತ ಬಂದು ಸಾಧಾರಣ ಸ್ವರೂಪದ ಗಾಯ ಮಾಡಿದ್ದು 1ನೇ ಆರೋಪಿಯು ಸ್ಟೀಲ್ ಸ್ಪಾನರ್ ನಿಂದ ಚಾಸಾ

1 ರವರ ಬಲಕಣ್ಣಿನ ಕೆಳಭಾಗದಲ್ಲಿ ಹೊಡೆದು ಸಾಧಾರಣ ಸ್ವರೂಪದ ರಕ್ತಗಾಯ ಮಾಡಿ ಗಲಾಟೆ ಮಾಡುತ್ತಿದ್ದಾಗ ಅಲ್ಲಿದ್ದ ಸಾರ್ವಜನಿಕರು ಅಡ್ಡ ಹೋಗಿ ಜಗಳವನ್ನು ಬಿಡಿಸಿ ಗಾಯಗೊಂಡಿದ್ದ ಚಾಸಾ 1ರವರನ್ನು ಚಿಕಿತ್ಸೆಗಾಗಿ ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಗೆ ಕರೆದಕೊಂಡು ಹೋಗುತ್ತಿದ್ದಾಗ ಆರೋಪಿಗಳು ಚಾಸಾ 1 ರವರನ್ನು ಕುರಿತು ನೀನು ಇನ್ನೊಂದು ಸರಿ ನಮ್ಮ ತಂಟೆಗೆ ಬಂದರೆ ನಿನಗೆ ಒಂದು ಗತಿ ಕಾಣಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿದ್ದು ಆ ಮೂಲಕ ಆರೋಪಿಗಳ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ ಭಾರತೀಯ ದಂಡ ಸಂಹಿತೆ ಕಲಂ 323, 324, 504, 506 ಸಹವಾಚಕ ಕಲಂ 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ.

3. ತನಿಖಾಧಿಕಾರಿಯು ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಭಾರತೀಯ ದಂಡ ಸಂಹಿತೆ ಕಲಂ 323, 324, 504, 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಸಂಜ್ಞಾವನ್ನು ತೆಗೆದುಕೊಳ್ಳಲಾಯಿತು. ಆರೋಪಿಗಳು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ.

4. ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ರ ಪ್ರಕಾರ ಆರೋಪಿಗಳಿಗೆ ಪ್ರಕರಣದ ದೋಷಾರೋಪಣಾ ಪಟ್ಟಿಯ ನಕಲನ್ನು ಒದಗಿಸಲಾಯಿತು. ದೋಷಾರೋಪಣೆಯನ್ನು ರಚಿಸಿ ಓದಿ ಹೇಳಲಾಯಿತು.

ಆರೋಪಣೆಯನ್ನು ಆರೋಪಿಗಳು ಅಲ್ಲಗಳೆದು ವಿಚಾರಣೆಯಾಗಬೇಕೆಂದು ತಿಳಿಸಿದ್ದರ ಮೇರೆಗೆ ಅಭಿಯೋಜನೆಯವರು ಸಾಕ್ಷಿದಾರರುಗಳ ಪೈಕಿ ಸಾಕ್ಷಿದಾರರಾದ ಪ್ರಾಸಾ 1 ರವರನ್ನು ವಿಚಾರಣೆಗೆ ಒಳಪಡಿಸಿದ್ದು ಹಾಗೂ 6 ದಾಖಲಾತಿಗಳನ್ನು ನಿಪಿ 1 ರಿಂದ 3 ಎಂದು ಗುರ್ತಿಸಿಕೊಂಡಿರುತ್ತಾರೆ.

5. ಅಭಿಯೋಜನೆಯವರ ಪರ ಮಾಡಿದ ಸಾಕ್ಷಿದಾರರಾದ ಪ್ರಾಸಾ 1 ರವರು ದೂರುದಾರರು, ಗಾಯಾಳು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ್ಯ ನುಡಿದಿರುವುದರಿಂದ ಹಾಗೂ ಅವರ ಸಾಕ್ಷ್ಯದಲ್ಲಿ ಆರೋಪಿಗಳ ವಿರುದ್ದ ಯಾವುದೇ ಸಾಕ್ಷ್ಯಾದಾರಗಳು ಕಂಡುಬರದೇ ಇದ್ದುದರಿಂದ ಉಳಿದ ಸಾಕ್ಷಿಗಳಿಗೆ ಸಮನ್ಸ್ ಜಾರಿಗೊಳಿಸಬೇಕೆಂಬ ಅಭಿಯೋಜನೆಯವರ ಕೋರಿಕೆಯನ್ನು ತಿರಸ್ಕರಿಸಲಾಯಿತು. ಆರೋಪಿಗಳ ವಿರುದ್ದ ಯಾವುದೇ ಸಾಕ್ಷ್ಯವಿಲ್ಲದೇ ಇರುವುದರಿಂದ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆಯನ್ನು ಕೈಬಿಡಲಾಯಿತು.

6. ವಾದವನ್ನು ಕೇಳಲಾಯಿತು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

**7.** ಮೇಲ್ಕಂಡ ಸಂಗತಿಗಳಿಂದ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಬಂದಿರುತ್ತದೆ.

1. **ದಿನಾಂಕ 13/11/2023 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಚಾಸಾ 1 ರವರು ಶಿಡ್ಲಘಟ್ಟ ನಗರ ಪೊಲೀಸ್ ಠಾಣಾ ಸರಹದ್ದಿನ ಕನಕನಗರದ ಅಂಜನಾದ್ರಿ ಬಾರ್ ಪಕ್ಕದಲ್ಲಿರುವ ಹೆಚ್ ಪಿ ಪೆಟ್ರೋಲ್ ಬಂಕ್ ನಲ್ಲಿ ಪೆಟ್ರೋಲ್ ಹಾಕಿಸಿಕೊಳ್ಳಲು ತನ್ನ ದ್ವಿಚಕ್ರ ವಾಹನದಲ್ಲಿ ಪೆಟ್ರೋಲ್ ಹಾಕಿಸಿಕೊಳ್ಳಲು ಹೋದಾಗ ಆರೋಪಿಗಳು ತಮ್ಮ ದ್ವಿಚಕ್ರ ವಾಹಗಳಲ್ಲಿ ಬಂದು ಮೊದಲು ನಮಗೆ ಪೆಟ್ರೋಲ್ ಹಾಕುವಂತೆ ಅಲ್ಲಿನ ಹುಡುಗರಿಗೆ ಹೇಳಿದಾಗ ಚಾಸಾ 1 ರವರು ಮೊದಲು ಬಂದಿರುವುದಾಗಿ ಮೊದಲು ಪೆಟ್ರೋಲ್ ಹಾಕಿಸಿಕೊಳ್ಳಬೇಕು ಎಂದಾಗ 1ನೇ ಆರೋಪಿಯು ಚಾಸಾ 1 ರವರನ್ನು ಕುರಿತು ಈ ತುರ್ಕು ನನ್ನ ಮಕ್ಕಳದು ಜಾಸ್ತಿ ಆಗಿದೆ ನಾವು ಪೆಟ್ರೋಲ್ ಹಾಕಿಸಿಕೊಂಡ ನಂತರ ನೀನು ಹಾಕಿಸುಕೋ ಎಂದು ಕೆಟ್ಟ ಮಾತುಗಳಿಂದ ಬೈದಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ?**

2. **ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ ಸಮಾನ ಉದ್ದೇಶದಿಂದ ಪೆಟ್ರೋಲ್ ಹಾಕಿಸಿಕೊಳ್ಳುವ ವಿಚಾರದಲ್ಲಿ ಚಾಸಾ 1 ರವರ ಮೇಲೆ ಜಗಳ ತೆಗೆದು ಕೈಗಳಿಂದ ಮೈಮೇಲೆ ಹೊಡೆದು ಆ ಪೈಕಿ 2ನೇ ಆರೋಪಿಯು ಮುಷ್ಟಿಯಿಂದ ತುಟಿಗೆ ಗುದ್ದಿದ್ದು ಅದರಿಂದ ಬಾಯಿ ಮತ್ತು ಮೂಗಿನಿಂದ ರಕ್ತ ಬಂದು ಸಾಧಾರಣ ಸ್ವರೂಪದ ಗಾಯ ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರ ುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ?**

3. **ಮೂನರೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಸಮಾನ ಉದ್ದೇಶದಿಂದ ಚಾಸಾ 1 ರವರ ಮೇಲೆ ಜಗಳ ತೆಗೆದು 1ನೇ ಆರೋಪಿಯು ಸ್ಟೀಲ್ ಸ್ಪಾನರ್ ನಿಂದ ಚಾಸಾ 1 ರವರ ಬಲಕಣ್ಣಿನ ಕೆಳಭಾಗದಲ್ಲಿ ಹೊಡೆದು ಸಾಧಾರಣ ಸ್ವರೂಪದ ಗಾಯವನ್ನುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ**

**ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ?**

4. **ಮೇಲೆ ಹೇಳಿದ ದಿನಾಂಕ ಸ್ಥಳ ಹಾಗೂ ಸಮಯದಲ್ಲಿ ಸಮಾನ ಉದ್ದೇಶದಿಂದ ಚಾಸಾ 1ರವರ ಮೇಲೆ ಜಗಳ ತೆಗೆದು ಆರೋಪಿಗಳು ಚಾಸಾ 1 ರವರನ್ನು ಕುರಿತು ನೀನು ಇನ್ನೊಂದು ಸರಿ ನಮ್ಮ ತಂಟೆಗೆ ಬಂದರೆ ನಿನಗೆ ಒಂದು ಗತಿ ಕಾಣಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿ ರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ?**

5. **ಯಾವ ಆದೇಶ?**

**8**. ನ್ಯಾಯಾಲಯದ ಮುಂದೆ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳ ಆಧಾರದ ಮೇಲೆ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 1 ರಿಂದ 4: **ನಕಾರಾತ್ಮಕವಾಗಿ**

ಅಂಶ 5 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

9. **ಅಂಶ 1 ರಿಂದ 4:-** ಈ ಅಂಶಗಳು ಒಂದಕ್ಕೊಂದು ಹೊಂದಿಕೊಂಡಿರುವುದರಿಂದ ಮತ್ತು ಪುನರಾವರ್ತವನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಒಟ್ಟಿಗೆ ವಿಮರ್ಶೆಗೆ ತೆಗೆದುಕೊಳ್ಳಲಾಗಿದೆ.

10. ಅಭಿಯೋಜನೆಯವರು ಆರೋಪಿಗಳ ವಿರುದ್ದ ಹೊರಿಸಿರುವ ಆಪಾದನೆಯನ್ನು ಸಾಬೀತುಪಡಿಸುವ ಸಲುವಾಗಿ ಪ್ರಾಸಾ 1 ರವರನ್ನು ವಿಚಾರಣೆಗೆ ಒಳಪಡಿಸಿದ್ದು ನಿಪಿ 1 ರಿಂದ 3 ನ್ನು ಗುರುತಿಸಿಕೊಂಡಿರುತ್ತಾರೆ. ಚಾಸಾ 1 ರವರನ್ನು ಪ್ರಾಸಾ 1 ಆಗಿ ವಿಚಾರಣೆಗೆ ಒಳಪಡಿಸಿದ್ದು ತಮಗೂ ಆರೋಪಿಗಳಿಗೂ ಬಾಯಿಮಾತಿನ ಜಗಳವಾಗಿದ್ದು, ಈ ಸಂಬಂಧ ತಾವು ಪೊಲೀಸ್ ಠಾಣೆಗೆ ಹೋಗಿ ಸಹಿಗಳನ್ನು ಹಾಕಿದ್ದು ಅದರಲ್ಲಿ ಏನು ವಿಚಾರ ಬರೆದಿದ್ದಾರೆ ಎಂಬುದು ಗೊತ್ತಿಲ್ಲ ಎಂದು ನಿಪಿ1 ದೂರನ್ನು ಗುರುತಿಸಿದ್ದು. ನಿಪಿ 2 ಮಹಜರ್ ನ್ನು ಗುರುತಿಸಿದ್ದು. ಆರೋಪಿಗಳು ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ನ್ಯಾಯಾಲಯದ ಮುಂದಿರುವ ಸ್ವಾನರನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದು ಪ್ರತಿಕೂಲ ಸಾಕ್ಷವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಅಭಿಯೋಜನೆಯವರು ಪಾಟೀ ಸವಾಲಿಗೆ ಒಳಪಡಿಸಿ ಘಟನೆಯ ಕುರಿತು ಸೂಚಿಸಿದ್ದರೂ ಕೂಡ ನಿರಾಕರಿಸಿದ್ದು ಯಾವುದೇ ಪೂರಕ ಸಾಕ್ಷ್ಯ ನುಡಿದಿಲ್ಲ.

11. ಈ ಪ್ರಕರಣದಲ್ಲಿ ಪ್ರತ್ಯಕ್ಷ ಹಾಗೂ ಗಾಯಾಳು ಸಾಕ್ಷಿಯಾದ ಪ್ರಾಸಾ 1 ರವರು ಯಾವುದೇ ಪೂರಕವಾದ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಹಾಗೂ ಪ್ರತಿಕೂಲ ಸಾಕ್ಷಿದಾರರಾಗಿರುತ್ತಾರೆ. ಆ ಕಾರಣದಿಂದ ಸದರಿ ಮೇಲೆ ಹೇಳಿದ ಸಾಕ್ಷಿಯ ಸಾಕ್ಷ್ಯಾಂಶವು ಆರೋಪಿಗಳ ವಿರುದ್ದ ಹೊರಿಸಲಾದ ಆರೋಪಗಳ ಸಾಭೀತಿಗೆ ಪೂರಕವಾಗಿ ಕಂಡುಬಂದಿರುವುದಿಲ್ಲ. ಅಭಿಯೋಜನೆಯವರು ಉಳಿದ ದೋಷಾರೋಪಣಾ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವಂತೆ ಕೋರಿಕೊಂಡಿದ್ದು, ಉಳಿದ ಸಾಕ್ಷಿದಾರರಾದ ತನಿಖಾಧಿಕಾರಿ ಮತ್ತು ಇತರೆ ಸಾಕ್ಷ್ಯಗಳ ವಿಚಾರಣೆ ಮಾಡುವುದರಿಂದ ಯಾವುದೇ ಪೂರಕ ಪ್ರಯೋಜನವಿಲ್ಲದ ಕಾರಣ ಅಭಿಯೋಜನೆಯವರ ಈ ಅಹವಾಲನ್ನು ತಿರಸ್ಕರಿಸಲಾಯಿತು ಮತ್ತು ಇತರೆ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ. ಆದ್ದರಿಂದ ಅಭಿಯೋಜನೆಯವರು ಆರೋಪಿಗಳ ಮೇಲೆ ಆರೋಪಿಸಿರುವ ಆರೋಪಗಳನ್ನು ಸಾಭೀತುಪಡಿಸಲು ವಿಫಲವಾಗಿದೆ ಎಂದು ಪರಿಗಣಿಸಿ ಅಂಶ 1 ರಿಂದ 4 ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

12. **ಅಂಶ ಸಂಖ್ಯೆ: 5** ಈ ಮೇಲೆ ಹೇಳಿರುವ ಕಾರಣಗಳಿಗಾಗಿ ತಲುಪಿರುವ ತೀರ್ಮಾನ ಮತ್ತು ಅಭಿಪ್ರಾಯಗಳಿಗೆ ಅನುಗುಣವಾಗಿ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ 1 ರಿಂದ 3 ನೇ ಆರೋಪಿಗಳ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 323, 324, 504, 506 ಸಹವಾಚಕ ಕಲಂ 34 ರಡಿಯಲ್ಲಿ ಹೊರೆಸಿರುವ ಆಪಾದನೆಗಳಿಂದ ಸದರಿ ಆರೋಪಿಗಳನ್ನು ದೋಷಮುಕ್ತರೆಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.**

**1 ರಿಂದ 3ನೇ ಆರೋಪಿಗಳ ಹಾಗೂ ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಪತ್ರಗಳು ಅಪೀಲಿನ ಅವಧಿ ಮುಗಿದ ನಂತರ ರದ್ದುಗೊಳ್ಳತಕ್ಕದ್ದು.**

**ಪಿಎಫ್ ನಂ 96/2023 ರಲ್ಲಿ ಕಾಣಿಸಿರುವ ಸ್ವಾನರನ್ನು ಅಪೀಲಿನ ಅವಧಿ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ.**

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮುಖಾಂತರ ಬೆರಳಚ್ಚು ಪಡಿಸಿದ್ದು ನಂತರ ತಪ್ಪುಗಳನ್ನು ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕಃ 02/07/2026 ರಂದು ಓದಲಾಯಿತು.)

MOHAMMED ROSHAN SHA
Digitally signed by MOHAMMED ROSHAN SHA
Date: 2026.07.08 13:10:55 +0530

**(ಮಹಮ್ಮದ್ ರೋಷನ್ ಷಾ)**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಶಿಡ್ಲಘಟ್ಟ**

## ಅನುಬಂಧ

**ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿಃ**

ಪ್ರಾಸಾ1: ಯಾರಬ್ ಬಾಬು

**ಅಭಿಯೋಜನೆಯ ಪರ ಗುರುತಿಸಿದ ದಾಖಲಾತಿಗಳ ಪಟ್ಟಿ.**

ನಿಪಿಃ1 : ದೂರು

ನಿಪಿಃ2 : ಮಹಜರ್

ನಿಪಿಃ3 : ಮರು ಹೇಳಿಕೆ

**ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿಗಳು:** -ಇಲ್ಲ -

**ಆರೋಪಿಗಳ ಪರ ಗುರುತಿಸಿದ ದಾಖಲೆಗಳುಃ** -ಇಲ್ಲ-

**ಅಭಿಯೋಜನೆಯ ಪರ ಗುರುತಿಸಿದ ಮುದ್ದೆ ಮಾಲುಗಳುಃ** -ಇಲ್ಲ-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಶಿಡ್ಲಘಟ್ಟ**